# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶಿಕ್ಷಣ ಇಲಾಖೆಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವಲಯದಡಿಯಲ್ಲಿ ಬರುವ **ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆಗೆ [ರಾಜ್ಯ ವಲಯ ಯೋಜನೆಗಳು],** ಸಂಬಂಧಿಸಿದಂತೆ 2014-15ನೇ ಸಾಲಿನ ಮುಂದುವರಿಕೆ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:- 1. ದಿನಾಂಕ: 08-04-2014 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು [ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಶಿಕ್ಷಣ ಇಲಾಖೆಯ [ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ವಲಯದಡಿ ಬರುವ ಕ್ಷೇತ್ರ ಇಲಾಖೆಗಳಗೆ ಸಂಬಂಧಿಸಿದಂತೆ 2014-15ನೇ ಸಾಲಿನ ಮುಂದುವರಿಕೆ ಕಾರ್ಯಕ್ರಮಗಳಿಗೆ ಮಂಜೂರಾತಿ ನೀಡಲು ನಡೆದ ಮಂಜೂರಾತಿ ಸಮಿತಿ ಸಭೆಯ ನಡವಳಿಗಳು.

2.. ಆರ್ಥಿಕ ಇಲಾಖೆಯ ಅಧಿಕೃತ ಜ್ಞಾಪನ ಪತ್ರ ಸಂ: ಎಫ್‌ಡಿ 3 ಬಿಪಿಇ 2014, ಬೆಂಗಳೂರು, 2014, ದಿ:07-03-2014.

*****

**ಪ್ರಸ್ತಾವನೆ**

(1) ಮೇಲೆ ಓದಲಾದ ದಿನಾಂಕ: 08-04-2014ರಂದು ನಡೆದ ಶಿಕ್ಷಣ ಇಲಾಖೆಯ [ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ವಲಯದಡಿ ಬರುವ ಕ್ಷೇತ್ರ ಇಲಾಖೆಗಳ 2014-15ನೇ ಸಾಲಿನ ಮುಂದುವರಿಕೆ ಕಾರ್ಯಕ್ರಮಗಳ ಮಂಜೂರಾತಿಗೆ ಸಂಬಂಧಿಸಿದಂತೆ ಇಲಾಖೆಯು ಸಲ್ಲಿಸಿದ ಪ್ರಸ್ತಾವನೆಯನ್ನು ಸುದೀರ್ಘವಾಗಿ ಪರಿಶೀಲಿಸಿ 2014-15ನೇ ಸಾಲಿನ ಮುಂದುವರಿಕೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಅನುಮೋದನೆ ನೀಡಿದೆ.

(2) ಇಲಾಖೆಯು ಸಲ್ಲಿಸಿದ ಪ್ರಸ್ತಾವನೆಯನ್ನು ಸುದೀರ್ಘವಾಗಿ ಪರಿಶೀಲಿಸಿ 2014-15ನೇ ಸಾಲಿನಲ್ಲಿನ ಮುಂದುವರಿಕೆ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

(3) ಮೇಲೆ (2)ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಅಧಿಕೃತ ಜ್ಞಾಪನ ಪತ್ರದಲ್ಲಿ 1ನೇ ಏಪ್ರಿಲ್ 2014 ರಿಂದ 31ನೇ ಮಾರ್ಚ್ 2015 ವರೆಗಿನ ಅವಧಿಯ ಧನ ವಿನಿಯೋಗದ ವಿಧೇಯಕವನ್ನು ರಾಜ್ಯ ವಿಧಾನ ಮಂಡಲವು ಅನುಮೋದಿಸಿದ್ದು, ಶಿಕ್ಷಣ ಇಲಾಖೆಯ ಅನುದಾನ/ವಿನಿಯೋಗಗಳನ್ನು ಈ ಅಧಿನಿಯಮವು ಅಧಿಕೃತಗೊಳಿಸುತ್ತದೆ ಎಂದು ತಿಳಿಸಿದೆ.

(4) ಮೇಲ್ಕಂಡ ಅಂಶಗಳ ಆಧಾರ ಪರಿಷ್ಕರಿಸಿ ಕೆಳಕಂಡಂತೆ ಆದೇಶಿಸಿದೆ.

(5) 2014-15ನೇ ಸಾಲಿಗೆ ಶಿಕ್ಷಣ ಇಲಾಖೆಯ [ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ವಲಯದಡಿ ಬರುವ **ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆಗೆ** (ರಾಜ್ಯ ವಲಯ ಯೋಜನೆಗಳು) ಸಂಬಂಧಿಸಿದಂತೆ, ಹೊಸ ಆಯವ್ಯಯದಲ್ಲಿನ ಯೋಜನಾ ಕಾರ್ಯಕ್ರಮಗಳಡಿಯಲ್ಲಿಯ ಮುಂದುವರಿಕೆ ಕಾರ್ಯಕ್ರಮಗಳಿಗೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1 ರಲ್ಲಿ ಸೂಚಿಸಿರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಲು ಈ ಕೆಳಗಿನ ಷರತ್ತುಗಳನ್ನು ಪಾಲಿಸಬೇಕೆಂಬ ನಿಬಂಧನೆಯನ್ನು ವಿಧಿಸಿ ಸರ್ಕಾರ ಅನುಮೋದನೆ ನೀಡಿದೆ.

- 2013-14ನೇ ಸಾಲಿನಲ್ಲಿ ಮುಂದುವರೆಸಲಾಗಿದ್ದ ಹಾಗೂ 2013-14ನೇ ಸಾಲಿನಲ್ಲಿ ಹೊಸದಾಗಿ ಮಂಜೂರು ಮಾಡಲಾದ ಕಾರ್ಯಕ್ರಮಗಳನ್ನು ಮಾತ್ರ ಈ ಆದೇಶದಂತೆ 2014-15ನೇ ಸಾಲಿಗೆ ಮುಂದುವರೆಸಿ ಅನುಷ್ಠಾನಗೊಳಿಸುವುದು.

- ಅನುಬಂಧ-2ರಲ್ಲಿ ತೋರಿಸಿದ ಕಾರ್ಯಕ್ರಮಗಳಿಗೆ **ಮೊದಲನೇ ತ್ರೈಮಾಸಿಕ** ಅನುದಾನವನ್ನು ಬಿಡುಗಡೆ ಮಾಡಿದ್ದು, ನಿಯಮಾನುಸಾರ ಭರಿಸುವುದು.

- ಈ ಆದೇಶದಲ್ಲಿ ಮುಂದುವರೆಸಿರುವ ಕಾರ್ಯಕ್ರಮಗಳಲ್ಲಿ ಯಾವುದೇ ಹೊಸ ಘಟಕಗಳ ಪ್ರಸ್ತಾವನೆ ಇದ್ದಲ್ಲಿ ಸರ್ಕಾರದ ಪ್ರತ್ಯೇಕ ಮಂಜೂರಾತಿಯನ್ನು ಪಡೆದು ನಂತರವೇ ಅನುಷ್ಠಾನಗೊಳಿಸತಕ್ಕದ್ದು.

- ಸಧ್ಯದಲ್ಲಿ ಅನುಷ್ಠಾನದಲ್ಲಿರುವ ಕಟ್ಟಡಗಳಿಗೆ ಅಂದಾಜು ವೆಚ್ಚದ ಶೇಕಡ 30ನ್ನು ಮೊದಲು ಒದಗಿಸಿಕೊಂಡು ನಂತರವೇ ಉಳಿಕೆ ಅನುದಾನವನ್ನು ಹೊಸ ಕಾಮಗಾರಿಗಳಿಗೆ ಉಪಯೋಗಿಸತಕ್ಕದ್ದು. ರಾಜ್ಯ ಹಾಗೂ ಕೇಂದ್ರ ಅನುದಾನದಲ್ಲಿ ಹೊಸ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರದ ಅನುಮತಿ ಪಡೆದ ನಂತರವೇ ನೀಡುವುದು.

- ಮುಂದುವರೆದ ಯೋಜನೆಗಳಡಿಯಲ್ಲಿ ಖರೀದಿಗಳಿಗೆ ಸಂಬಂಧಿಸಿದಂತೆ ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರ ಮತ್ತು ಅದರಡಿಯಲ್ಲಿನ ನಿಯಮಗಳನ್ನು ಚಾಚೂ ತಪ್ಪದೇ ಕಡ್ಡಾಯವಾಗಿ ಹಾಗೂ ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.

- ಗಣಕಯಂತ್ರಗಳ ಖರೀದಿಗೆ ಸಂಬಂಧಿಸಿದಂತೆ ಇ-ಗವರ್ನೆನ್ಸ್ ಇಲಾಖೆಯು ಸೂಚಿಸಿರುವಂತೆ ಕ್ರೀಯಾ ಯೋಜನೆಗೆ ರಾಜ್ಯ ಮಟ್ಟದ ಉನ್ನತಾಧಿಕಾರಿ ಸಮಿತಿಯ ಮತ್ತು ಟ್ಯಾಪ್ ನ ಅನುಮೋದನೆಯನ್ನು ಪಡೆಯತಕ್ಕದ್ದು.

25/4